

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

---

# ಅಸಾಧಾರಣ ಪ್ರತಿಭೆ

**1938** ನೆಯ ಇಸವಿ ಆಗಸ್ಟ್ 11 ನೇ ತಾರೀಖು ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಇತಿಹಾಸದಲ್ಲಿ ಒಂದು ಕರಾಳ ದಿನ. ಎಂತಹ ಕಲ್ಲು ಹೃದಯವನ್ನೂ ಕರಗಿಸುವಂತಹ ದಾರುಣ ಪ್ರಸಂಗ. ನಮ್ಮ ಗುರುವರ್ಯರ ಗುರುಗಳಾಗಿದ್ದ ಶ್ರೀ ಗುರುಶಾಂತರಾಜ ದೇಶಿಕೇಂದ್ರ ಮಹಾಸ್ವಾಮಿಗಳವರು ಬಡ ವಿದ್ಯಾರ್ಥಿಗಳಿಗೆಂದು ದಾವಣಗೆರೆಯಲ್ಲಿ ಒಂದು ಉಚಿತಪ್ರಸಾದನಿಲಯವನ್ನು ಸ್ಥಾಪಿಸಿದ್ದರು. ಅದರ ಮೇಲ್ವಿಚಾರಣೆಯನ್ನು ನೋಡಿಕೊಂಡು ಆಗತಾನೇ ದಾವಣಗೆರೆಯಿಂದ ಸಿರಿಗೆರೆಗೆ ದಯಮಾಡಿಸಿದ್ದರು. ಪ್ರಯಾಣದಿಂದ ದಣಿದಿದ್ದ ಪೂಜ್ಯ ಗುರುಗಳಿಗೆ ಬಾಯಾರಿಕೆಯಾಗಿತ್ತು. ಕುಡಿಯಲು ನೀರನ್ನು ಕೇಳಿದರು. ಒಡನೆಯೇ ಅವರಿಗೆ ಅತ್ಯಂತ ಪ್ರಿಯವಾಗಿದ್ದ ಮಜ್ಜಿಗೆಯನ್ನು ತಂದು ಕೊಡಲಾಯಿತು. ಶಿವದಾನವೆನಿಸಿದ ಮಜ್ಜಿಗೆಯಲ್ಲಿ ಶಿವದ್ರೋಹದ ಷಡ್ಯಂತ್ರ ನಡೆದಿದೆಯೆಂಬುದನ್ನು ಶಿವಭಾವದ ಹೃದಯವು ಅರಿಯದೇ ಹೋಯಿತು! ಸಮಾಜದಲ್ಲಿ ಪಟ್ಟದ ಸ್ವಾಮಿಗಳಿಗೇ ಹೆಚ್ಚಿನ ಅಧಿಕಾರ ಮತ್ತು ಮನ್ನಣೆ ಇರುವುದನ್ನು ನೋಡಿ ಈರ್ಷ್ಯಾಸೂಯೆಗಳಿಂದ ಕುದಿಯುತ್ತಿದ್ದ ಮಠದ ಇನ್ನಿತರ ಸ್ವಾಮಿಗಳು ಒಳಸಂಚು ನಡೆಸಿ ಮಜ್ಜಿಗೆಯಲ್ಲಿ ವಿಷವನ್ನು ಬೆರೆಸಿ ಕೊಡಿಸಿದ್ದರು. ಕ್ಷಣಾರ್ಧದಲ್ಲಿ ವಿಷವು ಪರಮಪೂಜ್ಯರ ಪ್ರಾಣವನ್ನು ಆಹುತಿ ತೆಗೆದುಕೊಂಡಿತ್ತು!

ಈ ಘೋರ ಕೃತ್ಯದ ಸುದ್ದಿಯು ಕಾಳ್ಗಿಚ್ಚಿನಂತೆ ಎಲ್ಲೆಡೆ ಹರಡಿ ಇಡೀ ಸಮಾಜವನ್ನು ಶೋಕಸಾಗರದಲ್ಲಿ ಮುಳುಗಿಸಿತು. ರೊಚ್ಚಿಗೆದ್ದ ಶಿಷ್ಯರು ಮಠದಲ್ಲಿ ಅವಿತುಕೊಂಡಿದ್ದ ಇತರ ಸ್ವಾಮಿಗಳ ಮೇಲೆ ಪ್ರತೀಕಾರವನ್ನು ತೆಗೆದುಕೊಳ್ಳಲು ಕೈಯಲ್ಲಿ ದೊಣ್ಣೆಗಳನ್ನು ಹಿಡಿದು ಮುನ್ನುಗ್ಗಿದರು. ಮುಖ ಮೋರೆಗಳನ್ನು ನೋಡದೆ ಆ ಪಾತಕಿಗಳನ್ನು ಹಿಡಿದು ಬಡಿಯ ತೊಡಗಿದರು. ಆದರೆ ಆ ಪಾಪಾತ್ಮರು ತೊಟ್ಟಿದ್ದ ಕಾವಿಯೇ ಅವರ ಪ್ರಾಣಕ್ಕೆ ರಕ್ಷಣೆಯಾಯಿತು. ಸಮಾಜದ ಹಿರಿಯರು ಕಾವಿಗೆ ಮನ್ನಣೆ ಕೊಟ್ಟು ಉದ್ರಿಕ್ತ ಗುಂಪನ್ನು ಹಿಂದಕ್ಕೆ ಸರಿಸಿದರು. ಕಾವಿಗೆ ಕಳಂಕ ತಂದ ಆ ನೀಚ ಸ್ವಾಮಿಗಳನ್ನು ಮಠದಿಂದ ದೂರ ಓಡಿಸಿದರು.

ಪ್ರತಿಕಾರದಿಂದ ಯಾವ ಫಲವೂ ಇರಲಿಲ್ಲ. ಆಗಬಾರದ ಘಟನೆ ಆಗಿ ಹೋಗಿತ್ತು. ಮಠಪೀಠಗಳ ಇತಿಹಾಸದಲ್ಲಿ ಎಂದೂ ಕಂಡರಿಯದ, ಕೇಳರಿಯದ ದುರ್ಘಟನೆಯೊಂದು ಸಂಭವಿಸಿತ್ತು. ಸಹಸ್ರಾರು ವಿದ್ಯಾರ್ಥಿಗಳಿಗೆ ಅನ್ನವನ್ನು ನೀಡಿ ಪೋಷಣೆ ಮಾಡಿದ ಪುಣ್ಯ ಜೀವಕ್ಕೆ ಕೊನೆಯಲ್ಲಿ ದೊರೆತದ್ದು ಅನ್ನವಲ್ಲ; ಪ್ರಾಣಾಂತಿಕ ವಿಷ! ಎಂತಹ ಹೃದಯವಿದ್ರಾವಕ ಸನ್ನಿವೇಶ! ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ಬಹುಶಃ ಪ್ರಪಂಚದ ಎಲ್ಲ ಮಹಾಪುರುಷರ ಜೀವನವು ಹೀಗೆ ದುಃಖಾಂತವಾಗಿ ಪರ್ಯವಸಾನಗೊಂಡಿರುವುದು ಕಾಣಬರುತ್ತದೆ. ಏಸುಕ್ರಿಸ್ತನನ್ನು ಶಿಲುಬೆಗೆ ಏರಿಸಲಾಯಿತು. ಮಹಾತ್ಮಾ ಗಾಂಧೀಜಿಯನ್ನು ಗುಂಡಿಕ್ಕಿ ಕೊಲ್ಲಲಾಯಿತು. ಆ ಮಹಾನುಭಾವರಂತೆಯೇ ವಿಷಪ್ರಾಶನದಿಂದ ಅಸುನೀಗಿದ ಶ್ರೀ ಗುರುಶಾಂತರಾಜ ದೇಶಿಕೇಂದ್ರ ಮಹಾಸ್ವಾಮಿಗಳವರ ಸಾವಿನ ದಾರುಣವಾರ್ತೆಯನ್ನು ಕೇಳಿದ ನಮ್ಮ ಪರಮಾರಾಧ್ಯ ಗುರುಗಳಾದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ದೂರದ ಬೇಲೂರು ತಾಲ್ಲೂಕು ಯಲಹಂಕಮಠದಿಂದ ಸಿರಿಗೆರೆಗೆ ಧಾವಿಸಿ ಬಂದರು. ಅನಿರೀಕ್ಷಿತ ಘಟನೆಯಿಂದ ಮರಣವನ್ನಪ್ಪಿದ ತಮ್ಮ ಗುರುವರ್ಯರ ಕಳೇಬರವನ್ನು ನೋಡಿ ದುಃಖ ಒತ್ತರಿಸಿ ಬಂತು. ಬೇಡನ ಬಾಣದಿಂದ ಗಾಯಗೊಂಡು ಆಕ್ರಂದಿಸುತ್ತಾ ಸತ್ತುಬಿದ್ದ ಕ್ರೌಂಚಪಕ್ಷಿಯನ್ನು ನೋಡಿ ಮರುಗಿದ ಮಹರ್ಷಿ ವಾಲ್ಮೀಕಿಯ ಬಾಯಿಂದ ಹೊರಟ 'ಮಾ ನಿಷಾದ' ಎಂಬ ಕಾವ್ಯಮಯ ಮಾತಿನಂತೆ ಅಂದಿನ ನಮ್ಮ ಗುರುವರ್ಯರ ಹೃದಯದ ಭಾವನೆಗಳು ಅವರ ದಿನಚರಿ 'ಆತ್ಮನಿವೇದನೆ'ಯಲ್ಲಿ ಅವರ ಲೇಖನಿಯಿಂದಲೇ ಕಾವ್ಯಮಯವಾಗಿ ಹೊರಹೊಮ್ಮಿದ್ದವು:

**"ಗುರುದೇವ! ನೀನು ನನ್ನ ಮೇಲೆ ಎಷ್ಟು ಕೃಪೆಯನ್ನಿಟ್ಟಿದ್ದೆ! ಅದೆಲ್ಲಾ ಎಲ್ಲಿ ಹೋಯಿತು! ಇನ್ನು ಮುಂದೆ ಯಾರನ್ನು ಗುರುವೇ ಎಂದು ಕರೆಯಲಿ? ಯಾರಿಗೆ ವಂದಿಸಲಿ? ನಿನ್ನ ವಾತ್ಸಲ್ಯ ದಯಾ ಪ್ರೇಮಗಳನ್ನು ಇನ್ನು ಮುಂದೆ ಯಾರಲ್ಲಿ**

**ನೋಡಲಿ? ಹಾ! ದಯಾ-ಸತ್ಯ-ಶಾಂತಿ ಗುಣಗಳೇ! ನಿಮ್ಮೆಲ್ಲರ ಆಧಾರವು ಕಣ್ಮರೆಯಾಯಿತು. ಇನ್ನು ನೀವು ಅನಾಥರಾದಿರಿ. ಇನ್ನೆಲ್ಲಿಗೆ ಹೋಗುವಿರಿ? ಗುರುದೇವ! ನಿನ್ನ ಹಸನ್ಮುಖವು ನನ್ನ ಕಣ್ಣೆದುರಿನಲ್ಲಿ ಕುಣಿಯುತ್ತಾ ಇದೆ. ಪರಮೇಶ್ವರ! ಸಮಾಜಕ್ಕೆ ನೀನು ಗುರುವಿನೋಪಾದಿಯಲ್ಲೂ, ತಂದೆಯೋಪಾದಿಯಲ್ಲೂ, ಬಂಧುವಿನೋಪಾದಿಯಲ್ಲೂ, ಮಿತ್ರನೋಪಾದಿಯಲ್ಲೂ ಇರುತ್ತಿದ್ದು ನಿಷ್ಕಾರಣವಾಗಿ ಅಲ್ಪ ದಿನಗಳಲ್ಲೇ ಎಲ್ಲರನ್ನೂ ಕೈಬಿಟ್ಟೆಯಲ್ಲಾ! ನಾವು ನಿರ್ಭಾಗ್ಯರು! ಗುರುದೇವ! ಸಮಾಜಕ್ಕೆ ಕಳಸೋಪಾದಿಯಲ್ಲಿದ್ದೆ. ಕಳಸವು ಮುರಿಯಿತು. ಇನ್ನು ಮುಂದೇನು ಗತಿ? ಸಮಾಜದ ಕಷ್ಟನಿಷ್ಠುರಗಳನ್ನು ನೋಡುವವರ್ಯಾರು? ನನ್ನ ಹೃದಯದ ದುಃಖಾಗ್ನಿಯನ್ನು ಶಾಂತಿ ಮಾಡುವ ಬಗೆ ಹೇಗೆ? ಗುರುದೇವ! ಗುರುದೇವ! ಗುರುದೇವ! ಗುರುದೇವ! ನಾನೆಂದೂ ಕಣ್ಣೀರು ಹಾಕಿದ್ದಿಲ್ಲ. ನನ್ನ ಜೀವಮಾನ...."**

ಭಾವುಕತೆಯಲ್ಲಿ ಲೇಖನಿ ಮುಂದುವರಿದಿಲ್ಲ. ಆದರೆ ಕಾಲಚಕ್ರ ನಿಲ್ಲುವಂತಿರಲಿಲ್ಲ. ಭೌತಿಕ ಶರೀರವು ವಿನಷ್ಟವಾದರೂ ತ್ಯಾಗ-ಬಲಿದಾನಗಳ ಹಿಂದೆ ಇದ್ದ ಸಂಕಲ್ಪ ಶಕ್ತಿ ಮಾತ್ರ ವಿನಷ್ಟಗೊಳ್ಳಲಿಲ್ಲ. ಸಮಾಜದ ಅಪೇಕ್ಷೆಯಂತೆ ನಮ್ಮ ಗುರುವರ್ಯರು ಮಠದ ಗದ್ದುಗೆಯನ್ನೇರಿದರು. ಬಡತನ, ದಾರಿದ್ರ್ಯ, ಅಜ್ಞಾನ, ಅಂಧಕಾರದಲ್ಲಿದ್ದ ಜನರನ್ನು ಜಾತಿಭೇದವನ್ನೆಣಿಸದೆ ಮುನ್ನಡೆಸಿದರು. ಸ್ವಾತಂತ್ರ್ಯಪೂರ್ವದ ದಿನದಿಂದಲೇ ನೂರಾರು ಶಾಲಾಕಾಲೇಜುಗಳನ್ನು ಹಳ್ಳಿಹಳ್ಳಿಗಳಲ್ಲಿ ಸ್ಥಾಪಿಸುತ್ತಾ ಗ್ರಾಮೀಣ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಮುಂದಾದರು. ಸಾಮಾಜಿಕ ಹೊಣೆಗಾರಿಕೆಯ ನಿರ್ವಹಣೆಯಲ್ಲಿ ಅವರ ಸಾಹಿತ್ಯಕೃಷಿ ಸೊರಗಿಹೋಯಿತು. ಆದರೆ ಅವರ ಜೀವನವೇ ಒಂದು ಸಾಹಸಗಾಥೆಯಾಗಿ ಜನಮಾನಸದಲ್ಲಿ ನೆಲೆಗೊಂಡಿತು. ಕಾಶಿಯಲ್ಲಿ ಓದಿ ಸಂಸ್ಕೃತಸಾಹಿತ್ಯದಲ್ಲಿ ಅಪಾರ ಪಾಂಡಿತ್ಯವನ್ನು ಪಡೆದಿದ್ದ ಅವರು ಮೇಲೆ ವಿವರಿಸಿದ ಘಟನೆಯನ್ನು ಕುರಿತು 'ದ್ರುತವಿಲಂಬಿತ' ಛಂದಸ್ಸಿನಲ್ಲಿ ರಚಿಸಿರುವ ಅಪ್ರಕಟಿತ ಸಂಸ್ಕೃತಶ್ಲೋಕವು ಕಾಳಿದಾಸನ ಕಾವ್ಯಪ್ರತಿಭೆಯನ್ನು ಸರಿಗಟ್ಟುವಂತಿದೆ:

> **ಪ್ರಲಯಕೇಲಿವಿಕರ್ಕಶಮೀಶ್ವರಂ ಶಮಯಿತುಂ ವಿಬುಧಾಃ ಶಮನಾಮೃತೈಃ**
> **ಶಮನಿಧಿಂ ಗುರುಶಾಂತಯತೀಶ್ವರಂ ಸಮನಯನ್ನಯನೋತ್ಸುಕದರ್ಶನಮ್ ।**
> **ಹತವಿಧೇ ಬಹುಧಾನ್ಯಶರದ್ವರ! ತ್ವಯಿ ಗುರೋರಿಹಲೋಕವಿಸರ್ಜನಮ್**
> **ಇತಿ ನೃಣಾಮಪವಾದಮಹೀಧರಂ ಕಥಮಮುಂ ವಹಸಿ ವ್ಯಸನಾವಹಮ್ ॥**

ಈ ಶ್ಲೋಕದ ತಾತ್ಪರ್ಯ ಹೀಗಿದೆ: ಪ್ರಳಯಕಾಲದಲ್ಲಿ ಶಿವನು ರುದ್ರಭೀಕರನಾಗಿ ಘುಡುಘುಡಿಸಿ ಆರ್ಭಟಿಸಿ ನರ್ತಿಸುತ್ತಿದ್ದ. ಅವನ ಕ್ರೋಧಾಗ್ನಿಯನ್ನು ಶಮನಗೊಳಿಸಲು ಬೇಕಾದ ಶಮನಾಮೃತವನ್ನು ಅರಸುತ್ತಾ ದೇವತೆಗಳು ಸಿರಿಗೆರೆಗೆ ಬಂದರು. ಶಾಂತಿಯೇ ಮೈವೆತ್ತಂತಿದ್ದ ಶ್ರೀ ಗುರುಶಾಂತ ಯತೀಶ್ವರರನ್ನು ನೋಡಿ ಆಕರ್ಷಿತರಾಗಿ ಶಿವನನ್ನು ಸಮಾಧಾನಪಡಿಸುವ ಸಲುವಾಗಿ ಕೈಲಾಸಕ್ಕೆ ಕರೆದುಕೊಂಡು ಹೋದರು. ಇದನ್ನು ಅರಿಯದ ಮುಗ್ಧ ಶಿಷ್ಯರು ಗುರುಗಳು ಲಿಂಗೈಕ್ಯರಾದ 'ಬಹುಧಾನ್ಯ' ಸಂವತ್ಸರವನ್ನು ಕುರಿತು 'ನಿನ್ನ ಕಾಲದಲ್ಲಿ ನಮ್ಮ ಗುರುಗಳು ಈ ಲೋಕವನ್ನು ತ್ಯಜಿಸುವಂತಾಯಿತು' ಎನ್ನುತ್ತಾ 'ಛೀ, ಥೂ' ಎಂದು ನಿಂದಿಸತೊಡಗಿದರು. ಹೀಗೆ ಜನರಿಂದ ನಿಂದನೆಗೊಳಗಾಗಿ ಲೋಕಾಪವಾದವನ್ನು ಹೊತ್ತುಕೊಂಡು ಹೇಗೆ ಈ ಲೋಕದಲ್ಲಿ ನೀನು ಬದುಕಿರುತ್ತೀಯಾ? ಎಂದು 'ಬಹುಧಾನ್ಯ' ಸಂವತ್ಸರವನ್ನು ಒಬ್ಬ ವ್ಯಕ್ತಿಯನ್ನಾಗಿ ಪರಿಭಾವಿಸಿಕೊಂಡು ರಚಿಸಿರುವ ಈ ಶ್ಲೋಕವು ಅತ್ಯದ್ಭುತವಾದ ಕಾವ್ಯಪರಿಕಲ್ಪನೆಯನ್ನು ಹೊಂದಿದೆ.

70 ರ ದಶಕದಲ್ಲಿ ಬನಾರಸ್ ಹಿಂದೂ ಯೂನಿವರ್ಸಿಟಿಯಲ್ಲಿ ನಾವು ಓದುತ್ತಿದ್ದಾಗ ನಮ್ಮ ಗುರುವರ್ಯರು 750 ಶಿಷ್ಯರೊಂದಿಗೆ ಉತ್ತರಭಾರತ ಪ್ರವಾಸ ಬಂದಿದ್ದರು. ಅವರಿಗೆ ಬಾಲ್ಯದಲ್ಲಿ ಸಂಸ್ಕೃತ ಪಾಠ ಹೇಳಿದ್ದ ಪಂಡಿತರು ಇನ್ನೂ ಬದುಕಿದ್ದರು. ಅವರ ಹೆಸರು ಪಂಡಿತ್ ಗೌರೀನಾಥ್ ಪಾಠಕ್. ಮೂಲತಃ ಮಹಾರಾಷ್ಟ್ರದವರು. ವಯೋವೃದ್ಧರಾದ ಅವರನ್ನು ಕಂಡು ವಿಷಯ ತಿಳಿಸಿದಾಗ 'ಕಿಂ, ಶಿವಕುಮಾರಃ ಸಮೇಷ್ಯತಿ!' ಎಂದು ಹಿಗ್ಗಿ ಹಾರೈಸಿ ನಮ್ಮ ಗುರುವರ್ಯರ ಬರವನ್ನು ಕಾಯುತ್ತಾ ಕುಳಿತಿದ್ದರು. 'ಕಾದಿರುವಳು ಶಬರಿ ರಾಮ ಬರುವನೆಂದು' ಎಂಬ ರಾಮಾಯಣದ ಪ್ರಸಂಗ ನೆನಪಾಯಿತು. ತಮಗೆ ಪಾಠಹೇಳಿದ ಪಂಡಿತರನ್ನು ಕಾಣಲು ಅಷ್ಟೇ ಕಾತುರ ನಮ್ಮ ಗುರುವರ್ಯರಲ್ಲಿತ್ತು. ಕಾಶಿಯ ದಶಾಶ್ವಮೇಧಘಾಟ್ ಸಮೀಪದಲ್ಲಿರುವ ನಿವಾಸ 'ಶಾರದಾಭವನ' ದಲ್ಲಿ ನಡೆದ ಉಭಯತರ ಸಮಾಗಮ ಅತ್ಯಂತ ಸುಮಧುರ ಹಾಗೂ ಸುಬಂಧುರವಾದ ಸಮಾಗಮವಾಗಿತ್ತು. ಪಂಡಿತರನ್ನು ನೋಡುತ್ತಿದ್ದಂತೆಯೇ ನಮ್ಮ ಗುರುವರ್ಯರು ಒಂದು ದೊಡ್ಡಮಠದ ಜಗದ್ಗುರುವೆಂಬ ಯಾವ ಬಿಗುಮಾನವೂ ಇಲ್ಲದೆ ತಮ್ಮ ವಿದ್ಯಾಗುರುವಿಗೆ ಮಂಡಿಯೂರಿ ತಲೆಬಾಗಿ ನಮಸ್ಕರಿಸಿದ್ದು ಎಲ್ಲರನ್ನೂ ಆಶ್ಚರ್ಯಚಕಿತರನ್ನಾಗಿ ಮಾಡಿತು. ಸಹಸ್ರಾರು ಜನರ ಬಾಳಿಗೆ ದಾರಿದೀವಿಗೆಯಾದ ಪರಮಪೂಜ್ಯ ಗುರುವರ್ಯರ ವ್ಯಕ್ತಿತ್ವವನ್ನು ರೂಪಿಸಿದ ಮಹಾನ್ ಶಿಲ್ಪಿಯನ್ನು ಕೃತಜ್ಞತಾಭಾವದಿಂದ ಒಮ್ಮೆ ನೋಡಿದರೆ, ಮತ್ತೊಮ್ಮೆ ಮಠದ ಗದ್ದುಗೆಯನ್ನು ಏರಿದ ಮೇಲೂ ತಮ್ಮ ವಿದ್ಯಾಗುರುವಿನ ಬಗ್ಗೆ ಅವರಲ್ಲಿದ್ದ ಶ್ರದ್ಧೆ ವಿನಯ ವಿನಮ್ರತೆಗಳನ್ನು ನೋಡಿ ಜೊತೆಯಲ್ಲಿದ್ದ ಪ್ರವಾಸಿಗರು ವಿಸ್ಮಯಗೊಂಡರು. ಉಭಯತರ ಸಂಭಾಷಣೆಯು ಕಾಲಗರ್ಭವನ್ನು ಭೇದಿಸಿ ವಿದ್ಯಾರ್ಥಿಜೀವನದ ಸಿಹಿ-ಕಹಿಯ ನೆನಪಿನ ಅಂಗಳದಲ್ಲಿ ವಿಹರಿಸಿತು! ಮಾತಿನ ಮಧ್ಯೆ ಪಂಡಿತರು ತಮ್ಮ

ಎಲ್ಲಾ ವಿದ್ಯಾರ್ಥಿಗಳಲ್ಲಿ 'ಇವರ ಬುದ್ಧಿ ಬಹಳ ಚುರುಕಾಗಿತ್ತು' (ಇನ್‌ಕೀ ಬುದ್ಧಿ ಬಹುತ್ ತೇಜ್ ಥೀ) ಎಂದು ಹೇಳುತ್ತಾ ಅದನ್ನು ಪ್ರತಿಪಾದಿಸಲೋಸುಗವೋ ಎನ್ನುವಂತೆ 1935 ರಲ್ಲಿ ಪ್ರಕಟಗೊಂಡ 'ಅಮರಭಾರತೀ' ಎಂಬ ಸಂಸ್ಕೃತ ಮಾಸಪತ್ರಿಕೆಯನ್ನು ತೋರಿಸಿದರು. ಆ ಪತ್ರಿಕೆಯ ಬೆನ್ನುಪುಟದಲ್ಲಿ ಪ್ರಕಟವಾದ ಪ್ರಕಾರ ಆ ಕಾಲದಲ್ಲಿ ಏರ್ಪಡಿಸಿದ್ದ 'ಛಾತ್ರೇಷು ವಿನಯಸ್ಯಾಽಽವಶ್ಯಕತಾ' (ವಿದ್ಯಾರ್ಥಿಗಳಲ್ಲಿ ವಿನಯದ ಆವಶ್ಯಕತೆ) ಎಂಬ ಸಂಸ್ಕೃತ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾಗಿ ಬಹುಮಾನಿತರಾದುದು, ನಿರ್ಣಾಯಕರಾದ ಮಹಾಮಹೋಪಾಧ್ಯಾಯ ಗೋಪೀನಾಥ ಕವಿರಾಜರಂತಹ ಮೂರ್ಧನ್ಯ ವಿದ್ವಾಂಸರಿಂದ ಮೆಚ್ಚುಗೆಯನ್ನು ಪಡೆದದ್ದು ನಮ್ಮ ಪೂಜ್ಯಗುರುವರ್ಯರ ವೈದುಷ್ಯಕ್ಕೆ ಕನ್ನಡಿ ಹಿಡಿದಂತಿದೆ. ಅಂದಿಗಿಂತ ಇಂದು ಅಶಿಸ್ತು ಮತ್ತು ಅನೀತಿಯುತವಾದ ದಾರಿಯನ್ನು ತುಳಿಯುತ್ತಿರುವ ಆಧುನಿಕ ವಿದ್ಯಾರ್ಥಿಪೀಳಿಗೆಯ ಚಾರಿತ್ರ್ಯನಿರ್ಮಾಣಕ್ಕೆ ಒಂದು ಕೈಪಿಡಿಯಾಗಬಹುದಾಗಿದ್ದ ಈ ಪ್ರಶಸ್ತಿವಿಜೇತ ಸಂಸ್ಕೃತ ಪ್ರಬಂಧವು ದೊರೆಯದೇ ಇರುವುದು ವಿಷಾದಕರ. ಆದರೂ ಗದ್ಯಲೇಖನಕ್ಕೆ ಮಾದರಿಯಾಗಿ ಮಹಾಕವಿ ಕಾಳಿದಾಸನ ಅಭಿಜ್ಞಾನ ಶಾಕುಂತಲ ನಾಟಕದ ಪ್ರತಿ ಅಂಕದಲ್ಲಿರುವ ಕಥಾಸಾರಾಂಶವುಳ್ಳ ಸುದೀರ್ಘ ಲೇಖನವು ದೊರೆತಿದ್ದು ಅದು ಗುರುವರ್ಯರ ಸಂಸ್ಕೃತ ಭಾಷಾ ಪ್ರೌಢಿಮೆಯನ್ನು ಪ್ರತಿಬಿಂಬಿಸುತ್ತದೆ.

ಮೇಲೆ ಉಲ್ಲೇಖಿಸಿದ ಸಂಸ್ಕೃತ ಮಾಸಪತ್ರಿಕೆ 'ಅಮರಭಾರತಿ'ಯು ಪಂಡಿತಶಿರೋಮಣಿ ವರಖೇಡಕರ ನರಸಿಂಹಾಚಾರ್ಯ, ಸಾಹಿತ್ಯಾಚಾರ್ಯ ಸಾಹಿತ್ಯವಾರಿಧಿ ನಾರಾಯಣಶಾಸ್ತ್ರೀ ಖಿಸ್ತೇ ಮೊದಲಾದ ಪ್ರಖ್ಯಾತ ಸಂಸ್ಕೃತ ವಿದ್ವಾಂಸರ ಸಂಪಾದಕತ್ವದಲ್ಲಿ 1934 ರ ನವಂಬರ್‌ನಲ್ಲಿ ಪ್ರಾರಂಭವಾಗಿದ್ದು ಆಗಿನ ಕಾಶೀ ಗವರ್ನ್‌ಮೆಂಟ್ ಸಂಸ್ಕೃತ ಕಾಲೇಜಿನ ಮುಖಪತ್ರಿಕೆಯ ರೂಪದಲ್ಲಿ ಪ್ರಕಾಶಗೊಳ್ಳುತ್ತಿತ್ತು. ಈ ಪತ್ರಿಕೆಯಲ್ಲಿ 'ಸಮಸ್ಯಾಪೂರ್ತಿ' ಎಂಬ ಒಂದು ವಿಶಿಷ್ಟಕಾವ್ಯಪ್ರಕಾರದ ವಿಭಾಗವಿದ್ದು ಅದರಲ್ಲಿ ಪ್ರತಿ ತಿಂಗಳೂ ಸಂಪಾದಕರು ಸೂಚಿಸುವ ಒಂದೊಂದು ಹೊಸ 'ಸಮಸ್ಯೆ'ಯ ಮೇಲೆ ವಿದ್ಯಾರ್ಥಿಗಳು/ಪಂಡಿತರು ರಚಿಸಿ ಕಳುಹಿಸಿದ ಶ್ಲೋಕಗಳನ್ನು ಆಯ್ದು ಪ್ರಕಟಿಸಲಾಗುತ್ತಿತ್ತು. ಹೀಗೆ ಆಯ್ಕೆಗೊಂಡ ಶ್ಲೋಕಗಳನ್ನು ವಿರಚಿಸಿದವರು ಕಾಶೀನಿವಾಸಿಗಳೇ ಅಥವಾ ಹೊರಗಿನವರೇ ಎಂದು ಗುರುತಿಸಿ 'ಕಾಶಿಕಾನಾಂ' ಮತ್ತು 'ವೈದೇಶಿಕಾನಾಂ' ಎಂದು ಎರಡು ವಿಭಾಗ ಮಾಡಿ ಮುದ್ರಿಸುತ್ತಿದ್ದರು. ಅದರಲ್ಲಿ ನಮ್ಮ ಗುರುವರ್ಯರು ರಚಿಸಿದ ಅನೇಕ ಶ್ಲೋಕಗಳು 'ವೈದೇಶಿಕಾನಾಂ' ಎಂಬ ವಿಭಾಗದಲ್ಲಿ 'ಮೈಸೂರ್ ರೇವಣಸಿದ್ಧದೇವಾನಾಮ್' ಎಂದು ಅವರ ಪೂರ್ವಾಶ್ರಮದ ಹೆಸರಿನಲ್ಲಿ ಪ್ರತಿತಿಂಗಳೂ ಪ್ರಕಟಗೊಂಡಿವೆ. ಅವುಗಳಲ್ಲಿ 1935 ರ ಸೆಪ್ಟೆಂಬರ್ ತಿಂಗಳಲ್ಲಿ ಪ್ರಕಟಗೊಂಡ ಪೂಜ್ಯ ಗುರುವರ್ಯರ ಅಪರೂಪದ ಎರಡು ಶ್ಲೋಕಗಳು ಮತ್ತು ನಮ್ಮ ಕನ್ನಡ ಭಾವಾನುವಾದ ಹೀಗಿವೆ:

**1. "ಜಾಗರ್ತಿ ನಿತ್ಯಂ ವಧೂಃ"**

**ಪೀಯೂಷಾಂಶುಗಭಸ್ತಿಭಿರ್ಧವಲಿತೇ ಕಾಷ್ಠಾಂತರಾಲೇ ಸ್ಫುರತ್**
**ಜ್ಯೋತ್ಸ್ನಾಜಾಲಗಲತ್‌ಸುಧಾರಸಲವೈರಾಪ್ಲಾವಿತೇ ಭೂತಲೇ ।**
**ಕಾಂತಂ ಪ್ರೋಷಿತಮಂಜಸಾ ಸ್ಮೃತಿಪಥಾಯಾತಂ ವಿದಿತ್ವಾ ಪುನರ್**
**ಹಸ್ತನ್ಯಸ್ತಕಪೋಲಜಾಗ್ರದಧೃತಿರ್ಜಾಗರ್ತಿ ನಿತ್ಯಂ ವಧೂಃ ॥ (ಅಮರಭಾರತೀ 20.3.1935)**

**"ಇನಿಯನಂ ಜಾನಿಸಿಹಳು"**

**ಹುಣ್ಣಿಮೆಯ ಚಂದಿರನ ಹಾಲು ಚೆಲ್ಲುವ ಕಿರಣ**
**ನಟ್ಟಿರುಳ ಬಾನಿನಲಿ ಬೆಳಗುತಿರಲು**

**ಬೆಳುದಿಂಗಳ ಬಟ್ಟಲಿಂ ಸುರಿವ ಸುಧಾರಸವು**
**ಇಳೆಯೊಳಗೆ ಭೋರ್ಗರೆದು ಹರಿಯುತಿರಲು**

**ಕಡಲಾಚೆ ಪಯಣಿಸಿದ ನಲ್ಮೆಯಾ ನಲ್ಲನು**
**ಒಡನೆಯೇ ಸ್ಮೃತಿಪಥದಿ ಮರಳಿ ಬರಲು**

**ಮತ್ತೆ ತಿಳಿದೆಚ್ಚರದಿ ಗಲ್ಲದಡಿ ಕೈಯಿಟ್ಟು**
**ಇರುಳೆಲ್ಲ ಇನಿಯನಂ ಜಾನಿಸಿಹಳು**

**2. "ನಾನ್ನಂ ಧರಿತ್ರೀತಲೇ"**

**ಯೂಯಂ ಭೋಃ ಚಣಕಾದಿನಃ ಸುರಗಿರಿಪ್ರಾಕಾಮ್ಯಬದ್ಧಾಗ್ರಹಾಃ**
**ಯುಷ್ಮತ್ತಃ ಪೃಥಿವೀತಲೇ ಕಿಮಪಿ ನೋ ಕಾರ್ಯಂ ಭವತ್ಯದ್ಭುತಮ್ ।**
**ಇತ್ಥಂ ವಿಸ್ಮೃತಭಾರತಾಃ ಶ್ರುತಿರತಾನ್ ನಿಂದಂತಿ ಯೇಽನಾರತಂ**
**ತೇಷಾಂ ಪಾಶ್ಚಿಮಶಿಕ್ಷಣವ್ಯಸನಿನಾಂ ನಾನ್ನಂ ಧರಿತ್ರೀತಲೇ ॥ (ಅಮರಭಾರತೀ 12.9.1935)**

**"ಅನ್ನವಿಲ್ಲ ಇಳೆಯೊಳಗೆ"**

**ಮೇರುಗಿರಿಯ ಸುತ್ತ ಗಿರಿಕಿ ಹೊಡೆಯುತ್ತ**
**ಕಡಲೆಕಾಯಿ ತಿನ್ನುವ ಹೆಣಮೂಳರು ನೀವು**

**(ಸಂಸ್ಕೃತದ ಕೋಟೆಯೊಳಗೆ ಬಾವಿಕಪ್ಪೆಗಳಾಗಿ**
**ವಟವಟಗುಟ್ಟುತ್ತ ಮಾರುದ್ದ ಹಾರಿ)**

**ಹೀಗೆಂದು ಹೀಗಳೆವರು ವೇದವೇದಾಂತಿಗಳನು**
**ಭಾರತೇತಿಹಾಸ ಮರೆತ ಮೂಢಜನರು**

**(ಶೂನ್ಯವನು ವಿಶ್ವಕ್ಕೆ ಕೊಟ್ಟದ್ದು ಭಾರತ**
**ಶಾಂತಿಸಂದೇಶವನು ಸಾರಿದ್ದು ಭಾರತ**

**ವಿಶ್ವಕುಟುಂಬತ್ವವನು ಬೋಧಿಸಿದ್ದು ಭಾರತ**
**'ಪೂರ್ಣಮದಃ ಪೂರ್ಣಮಿದಂ' ಎಂದದ್ದು ಭಾರತ**

**ವಿಶ್ವದೆಲ್ಲೆಡೆಯಿಂದ ಜ್ಞಾನ ಹರಿದು ಬರಲೆಂದ**
**ವಿಶ್ವಾತ್ಮನಿಂದ ನೀ ಬೇರೆಯಲ್ಲವೆಂದ**

**ಹೆಮ್ಮೆಯ ಭಾರತವ ತಿಳಿಯದ ಮೂರ್ಖರಿಗೆ**
**ಹೆತ್ತ ತಾಯಿ ಯಾರೆಂದು ಅರಿಯದ ಅಜ್ಞಾನಿಗಳಿಗೆ**

**ಭಾರತದೊಳಗಿದ್ದರೂ ಪರದೇಶಿಗಳಾಗಿ**
**ಮಮ್ಮಿಡ್ಯಾಡಿ ಸಂಸ್ಕೃತಿಗೆ ಮಾರುಹೋಗಿ**

**ಬರ್ಗರ್ ಪಿಸ್ತ ತಿನ್ನುವ ಕೂಳುಬಾಕರಿಗೆ**
**ವಿಸ್ಕಿವೈನು ಗುಟುಕರಿಸುವ ಪಾನಮತ್ತರಿಗೆ)**

**ಪಾಶ್ಚಾತ್ಯ ಸಂಸ್ಕೃತಿಯ ದುರ್ವ್ಯಸನಿಗಳಿಗೆ**
**'ಅನ್ನವಿಲ್ಲ ಇಳೆಯೊಳಗೆ' ದುರ್ಮಾರ್ಗಿಗಳಿಗೆ!**

'ಅನ್ನವಿಲ್ಲ ಇಳೆಯೊಳಗೆ' ಎಂಬ ವಿಷಯ ಕುರಿತು ಪದ್ಯ ಬರೆಯಲು ತೊಡಗಿದರೆ ಸಹಜವಾಗಿ ಬರುವ ಕಲ್ಪನೆ ಕ್ಷಾಮ-ಡಾಮರ. ಮಳೆ ಇಲ್ಲ, ಬೆಳೆ ಇಲ್ಲ. ಜನ-ಜಾನುವಾರಗಳಿಗೆ ತಿನ್ನಲು ಆಹಾರವಿಲ್ಲ, ಕುಡಿಯಲು ನೀರಿಲ್ಲ. ಆದರೆ ಮಾಮೂಲಿಯಾದ ಆ ಕಲ್ಪನೆಗಳನ್ನು ಬಿಟ್ಟು ಯಾರ ಊಹೆಗೂ ನಿಲುಕದ ಇಲ್ಲಿಯ ಪರಿಕಲ್ಪನೆ ಅದ್ಭುತವಾದ ಕಾವ್ಯಪ್ರತಿಭೆ. ಒಂದು ಕಾಲದಲ್ಲಿ ಕೆಳವರ್ಗದವರಿಗೆ ಕಲಿಯಲು ನಿಲುಕದ ಸಂಸ್ಕೃತ ಮತ್ತು ಪ್ರಾಚೀನ ಗ್ರಂಥಗಳನ್ನು ಈಗ ಎಷ್ಟೇ ನಿರಾತಂಕವಾದ ವಾತವಾರಣವಿದ್ದರೂ ಕಲಿಯಲು ಉಪೇಕ್ಷೆ. ಸಂಸ್ಕೃತ ಓದುವವರನ್ನು ಕುರಿತು ಈಗಲೂ ಮೂದಲಿಕೆಯ ಮಾತುಗಳು ಕೇಳಿಬರುತ್ತಿವೆ. ಸಂಸ್ಕೃತ ಓದುವವರಿಂದ ಈ ಪ್ರಪಂಚದಲ್ಲಿ ಯಾವ ಅದ್ಭುತಕಾರ್ಯವೂ ಆಗುವುದಿಲ್ಲವೆಂದು ಮೂಗುಮುರಿಯುವ ಜನ ಭಾರತದ ಇತಿಹಾಸವನ್ನು ಮರೆತಿದ್ದಾರೆ. ಪಾಶ್ಚಿಮಾತ್ಯ ಶಿಕ್ಷಣದಿಂದ ಪ್ರಭಾವಿತರಾದ ಅಂತಹ ಜನರಿಗೆ 'ಈ ಭೂಮಿಯ ಮೇಲೆ ಉಣ್ಣಲು ಅನ್ನವಿಲ್ಲ' ಎಂಬ ತೀಕ್ಷ್ಣವಾದ ಪ್ರತಿಕ್ರಿಯೆಯನ್ನು ಕಳೆದ ಶತಮಾನದ ಆರಂಭದಲ್ಲಿ ವ್ಯಕ್ತಪಡಿಸಿದ ಈ ಅಸಾಧಾರಣ ಪ್ರತಿಭೆ ಕಣ್ಮರೆಯಾಗಿ ನಾಳೆಗೆ 17 ವರ್ಷಗಳು ಸಲ್ಲುತ್ತವೆ.

**23.9.2009**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**